**ಓ.ಎಸ್.ನಂಬ್ರ: 481/2023 ಡಿ.ಡಬ್ಲ್ಯೂ :2**

ದಿನಾಂಕಃ 05-04-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಸಿ.ಎಸ್.ಪಿ. ವಕೀಲರಿಂದ**

ನಾನು ಬಿ.ಎ ವರೆಗೆ ಓದಿರುತ್ತೇನೆ. ನಾನು ಮೊದಲು ಸರ್ಕಾರಿ ಉದ್ಯೋಗದಲ್ಲಿ ಇದ್ದೆ. ಈಗ ನಿವೃತ್ತಿ ಹೊಂದಿರುತ್ತೇನೆ. ನಾನು ಬ್ರಹ್ಮಾವರದಲ್ಲಿ ವಾಸವಿದ್ದೇನೆ. ಈ ದಾವೆಯಲ್ಲಿ ಸಾಕ್ಷಿ ಹೇಳಲು ಬರುವಂತೆ ಅಣ್ಣಪ್ಪರವರು ಹೇಳಿರುತ್ತಾರೆ. ನಮ್ಮ ಮನೆಯಲ್ಲಿ ಪಾಲು ಮಾಡುತ್ತಿದ್ದೇವೆ ವೀಲು ನಾಮೆಗೆ ಸಹಿ ಮಾಡಿ ಎಂದು ಹೇಳಿರುತ್ತಾರೆ. ಅವರು ನನಗೆ ವೀಲುನಾಮೆಯ ಪ್ರತಿಯನ್ನು ತೋರಿಸಿರುತ್ತಾರೆ. ನಾನು ಹುಟ್ಟಿದಾಗಿನಿಂದ ವಾದಿಯ ಪರಿಚಯ ಇದೆ. ವಾದಿ ನನ್ನ ನೆರೆ ಮನೆಯವರು. ಅರೆ ಬೈಲು ಸುಬ್ಬಿ ಹೆಂಗಸ್ಸು ನಮ್ಮ ನೆರೆ ಮನೆಯವರು. ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದ ಅರೆಬೈಲು ಗಣಪರವರನ್ನು ಗೊತ್ತಿದೆ. ಅವರಿಬ್ಬರಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ.

2. ಈ ದಾವೆಯ ನಿ.ಡಿ.2 ಮತ್ತು 3 ವೀಲುನಾಮೆಯನ್ನು ನಾನು ಓದಿರುತ್ತೇನೆ. ದಿಃ 15.10.1999ರಲ್ಲಿ ಕುಂದಾಪುರದ ಸದಾನಂದ ಶೆಟ್ಟಿ ವಕೀಲರ ಕಚೇರಿಯಲ್ಲಿ ತಯಾರಿಸಿರುತ್ತಾರೆ. ಸದ್ರಿ ದಾಖಲೆಗೆ ಸಹಿ ಮಾಡಲು ಗಣಪರವರು ವಕೀಲರ ಕಚೇರಿಗೆ ಹೋಗಿರುತ್ತಾರೆ. ಆ ಸಮಯ ಸುಕ್ರು ಹೆಂಗಸ್ಸು ಮನೆಯಲ್ಲಿ ಇದ್ದರು. ಸದ್ರಿ ದಾಖಲೆಗಳನ್ನು ತಯಾರಿಸುವ ದಿನ ನಾನು ಮನೆಯಲ್ಲಿ ಇದ್ದೆ. ಗಣಪರವರ ಜೊತೆ ವಕೀಲರ ಕಚೇರಿಗೆ ಅಣ್ಣಪ್ಪರವರು ಹೋಗಿರುತ್ತಾರೆ ಮತ್ತು ಅವರ ಜೊತೆ ಬೇರೆ ಯಾರು ಹೋಗಿರುವುದಿಲ್ಲ. ಆ ಸಮಯ ನಾಗಮ್ಮ ರವರು ಮನೆಯಲ್ಲಿ ಇದ್ದರು. ಆ ದಿನ ವಕೀಲರ ಕಚೇರಿಗೆ ಬೆಳಿಗ್ಗೆ ಹೋಗಿರುತ್ತಾರೆ. ನಾನು ನಿ.ಡಿ.2 ಮತ್ತು 3 ದಾಖಲೆಗೆ ಮನೆಯಲ್ಲಿ 4 ಗಂಟೆಗೆ ಸಹಿ ಮಾಡಿರುತ್ತೇನೆ.

ಮುಂದೂವರಿದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**